ಬೀಳುವಾಗ ಮರದ ಮೇಲೆ ಆಶ್ರಯ ಪಡೆದಿದ್ದ ಕೆಲವು ಹಕ್ಕಿಗಳು ಮತ್ತು ಪ್ರಾಣಿಗಳು ನಡುರಾತ್ರಿಯಲ್ಲಿ ಕಿರುಚಿಕೊಂಡು ಅತ್ಯಂತ ಭಯಾನಕ ವಾತಾವರಣವೊಂದು ನಿರ್ಮಾಣವಾಗುತ್ತಿತ್ತು. ಬಿದ್ದ ಮರಗಳ ತೊಗಟೆಯು ಬಂಟಮಲೆಯ ತೇವಾಂಶದಲ್ಲಿ ನಿಧಾನವಾಗಿ ಕರಗುತ್ತಿದ್ದಂತೆ ತೊಗಟೆಯ ಒಳಗಿನಿಂದ ಬಗೆ ಬಗೆಯ ಹುಳುಗಳು ಹೊರಬರುತ್ತಿದ್ದವು. ಹಲವು ಬಣ್ಣಗಳ, ವಿವಿಧ ಆಕಾರಗಳ ಆ ಹುಳುಗಳ ಜೊತೆ ನನ್ನ ಗೆಳೆತನ. ಪ್ರೀತಿಯಿಂದ ಕೈಯಲ್ಲಿ ಸಣ್ಣ ಕೋಲು ಹಿಡಿದು ಆ ಹುಳುಗಳನ್ನು ಮುಟ್ಟದರೆ ಅವು ತಮ್ಮ ಪುಟ್ಟ ಹೆಡೆಬಿಚ್ಚಿ ಮತ್ತೆ ಮರೆಗೆ ಸರಿಯುತ್ತಿದ್ದುವು. ಹುಳುಗಳ ಜೊತೆಗಣ ನನ್ನ ಬಗೆ ಬಗೆಯ ಸಂಭಾಷಣೆಗಳೇ ನಾನು ಬರಕೊಂಡ ಮಹಾಕಾವ್ಯಗಳು!

ಆ ಕಾಲದಲ್ಲಿ ಒಣಗಿದ ಮೀನು ಹೊತ್ತುಕೊಂಡು ಮನೆಗೆ ಬರುತ್ತಿದ್ದವನೆಂದರೆ ಕುಟ್ಟ ಬ್ಯಾರಿ. ತಲೆಯಲ್ಲಿ ಗೋಣಿ ಚೀಲ ಹೊತ್ತುಕೊಂಡು, ಆತ ಬಂಟಮಲೆಯೊಳಕ್ಕೆ ಪ್ರವೇಶಿಸುತ್ತಿದ್ದ. ಬಂದವನೇ 'ಯಜಮಾನ ಉಂಟೋ' ಅಂತ ಕೇಳಿ ಪಟ್ಟಾಂಗಕ್ಕೆ ಸಿದ್ಧವಾಗುತ್ತಿದ್ದ. ಅವರಿಬ್ಬರ ನಡುವೆ ನಡೆಯುತ್ತಿದ್ದ ಪಟ್ಟಾಂಗವೊಂದು ರಮ್ಯಾದ್ಭುತ ಲೋಕ.

ಮನೆಯಿಂದ ಸಾಕಷ್ಟು ದೂರದಲ್ಲಿದ್ದ ಇಟ್ಯಡ್ಕ ಎಂಬಲ್ಲಿ ನಡೆಯುತ್ತಿದ್ದ ಸುಗ್ಗಿ ತಿಂಗಳ ಭೂತ ಕೋಲದಲ್ಲಿ ದೈವವಾಗುತ್ತಿದ್ದ ಬೀರ ಅಜಿಲಾಯನು, ಕುಣಿಯುತ್ತಾ ಕೊನೆಗೊಮ್ಮೆ ಹತ್ತಿರ ಬಂದು ತಲೆಮುಟ್ಟಿ ಅದೇನೋ ಆಶೀರ್ವಾದ ಮಾಡುತ್ತಿದ್ದ. ದೇವರು ಮುಟ್ಟಿದಾಗ ಆಗುವ ರೋಮಾಂಚನ ಇಡೀ ವರ್ಷಕ್ಕೆ ಸಾಕಾಗುತ್ತಿತ್ತು.

ಹೀಗೆ, ಇಲಿಗಳು, ಕೇರೆ ಹಾವು, ಹುಳಗಳು, ಕುಟ್ಟ ಬ್ಯಾರಿ, ಬೀರ ಅಜಿಲ ಇವರೆಲ್ಲ ಬಾಲ್ಯ ಕಾಲದ ಸಂಗಾತಿಗಳು. ಮತ ಧರ್ಮ, ಕೋಮು, ಜಾತಿ ಯಾವುದೂ ಇಲ್ಲದ ಮನುಕುಲದ ನೆನಪುಗಳವು.

◆ ಮಿಥ್(ಪುರಾಣ)ಗಳ ಬಗ್ಗೆಯೂ ನೀವು ಕೆಲಸ ಮಾಡಿದ್ದೀರಿ. ಅವುಗಳ ಮೂಲಕ ನಮ್ಮ ಸಂಸ್ಕೃತಿಯನ್ನು ಹೇಗೆ ಪ್ರವೇಶಿಸಬಹುದು?

ಕತೆ ಹೇಳುವುದು ನಮ್ಮ ಸಂಸ್ಕೃತಿಯ ಮೂಲಗುಣ. ನನ್ನ ಅಜ್ಜ ಬಂಟಮಲೆಯಲ್ಲಿ ಕುಳಿತು ನೆಹರೂ ಕತೆ ಹೇಳುತ್ತಿದ್ದರು. ಅಪ್ಪ ಬಳ್ಪ ಎಂಬ ಪುಟ್ಟ ಊರಿಗೆ ಬಂದ ಪಾಂಡವರು ಕೆರೆ ಕಟ್ಟಿದ ಕತೆ ಹೇಳುತ್ತಿದ್ದರು. ಅಮ್ಮೆ ಊರಿನ ಅಜ್ಜ ಸೀತೆಯ ತಲೆಯಲ್ಲಿದ್ದ ಹೂ ನಮ್ಮೂರಿನ ಬೆಟ್ಟದಲ್ಲಿ ಬಿದ್ದ ಕತೆಯನ್ನು ಹೇಳುತ್ತಿದ್ದರು. ಅಮ್ಮ ಅಣ್ಣನು ತಂಗಿಯನ್ನು ಮದುವೆಯಾಗಬಯಸುವ ಬಾಳೆಮೀನು ಮುಗುಡು ಮೀನು ಕತೆ ಹೇಳುತ್ತಿದ್ದರು.

ಇಂಥ ಅನೇಕ ಕತೆಗಳ ಸುತ್ತ ಇನ್ನಷ್ಟು ನಂಬಿಕೆಗಳೂ ಆಚರಣೆಗಳೂ ಸೇರಿಕೊಂಡು ತುಂಬ ಸಂಕೀರ್ಣವಾದ ಮತ್ತು ವೈವಿಧ್ಯಮಯವಾದ ರಚನೆಯೊಂದು ಸೃಷ್ಟಿಯಾಗುತ್ತದೆ. ಈ ಕತೆಗಳು ಮತ್ತು ಪುರಾಣಗಳು ನಮ್ಮ ಊರನ್ನು, ಜನಗಳನ್ನು, ಕೆರೆಗಳನ್ನು, ಕಲ್ಲುಗಳನ್ನು, ಬೆಟ್ಟಗಳನ್ನೂ ಎಲ್ಲೆಲ್ಲಿಗೋ ಜೋಡಿಸುತ್ತಿದ್ದುವು. ಇದೊಂದು ಅಸಾಧಾರಣ ಸಂಗತಿ. ಇವುಗಳನ್ನು ಅರಿಯುವುದು ಬಹಳ ಮುಖ್ಯ.

◆ ದೆಹಲಿಯ ಕನ್ನಡ ಸಂಘವನ್ನು ಕಟ್ಟಿದವರು ನೀವು. ರಾಜಕಾರಣಿಗಳೊಂದಿಗೆ ನಿಮಗೆ ಉತ್ತಮ ಒಡನಾಟ ಕೂಡ ಇದೆ. ಕನ್ನಡ ಸಂಸ್ಕೃತಿಗೆ ಸಂಬಂಧಿಸಿದಂತೆ ಯಾವ ರಾಜಕಾರಣಿ ತಕ್ಷಣಕ್ಕೆ ಪ್ರತಿಕ್ರಿಯಿಸುತ್ತಾರೆ?

ಕನ್ನಡ ಕರ್ನಾಟಕದ ವಿಷಯಕ್ಕೆ ಸಂಬಂಧಿಸಿದಂತೆ ಯಾವ ರಾಜಕಾರಣಿಯೂ 'ಇಲ್ಲ' ಅನ್ನುವುದಿಲ್ಲ. ಆದರೆ ಅಂಥ ಕೆಲಸ ಮಾಡಿಕೊಡಬಲ್ಲ ಶಕ್ತಿ ಇರುವವರು ಮಾತ್ರ ಕೆಲವರೇ ಇದ್ದಾರೆ. ಅದರಲ್ಲಿ ಈಚೆಗೆ ತೀರಿಕೊಂಡ ಸಂಸದ ಅನಂತ ಕುಮಾರ್ ಅವರು ಪ್ರಮುಖರು. ಕನ್ನಡ ಹಿಂದಿ ಇಂಗ್ಲಿಷ್